International Journal of Kannada Research
www.kannadajournal.com

**ISSN: 2454–5813**
IJKR 2019; 5(1): 233-235
© 2019 IJKR
www.kannadajournal.com
Received: 20-11-2018
Accepted: 25-12-2018

**ರಾಮರೆಡ್ಡಿ.ಕೆ**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ, ಕೆ.ಎಲ್.ಇ.
ಸಂಸ್ಥೆಯ, ಎಸ್.ವಿ.ಎಸ್. ಬೆಳ್ಳುಬ್ಬಿ
ಮಹಾವಿದ್ಯಾಲಯ, ಸವದತ್ತಿ,
ಬೆಳಗಾವಿ ಜಿಲ್ಲೆ. ಕರ್ನಾಟಕ ರಾಜ್ಯ

**Correspondence**
**ರಾಮರೆಡ್ಡಿ.ಕೆ**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ, ಕೆ.ಎಲ್.ಇ.
ಸಂಸ್ಥೆಯ, ಎಸ್.ವಿ.ಎಸ್. ಬೆಳ್ಳುಬ್ಬಿ
ಮಹಾವಿದ್ಯಾಲಯ, ಸವದತ್ತಿ,
ಬೆಳಗಾವಿ ಜಿಲ್ಲೆ. ಕರ್ನಾಟಕ ರಾಜ್ಯ

# ಹೊಸಗನ್ನಡ ಸಾಹಿತ್ಯದ ಮೇಲೆ ಸ್ವಾತಂತ್ರ್ಯ ಚಳುವಳಿಯ ಪ್ರಭಾವ

**ರಾಮರೆಡ್ಡಿ.ಕೆ**

'ಯಾವುದೇ ಭಾಷೆಯ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೂ ಅದರಲ್ಲಿ ಪ್ರಾಚೀನ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯ ಎಂಬ ಭೇದವು ಕಂಡುಬರುತ್ತದೆ. ಆದರೆ ಕನ್ನಡದಲ್ಲಿಯೂ ಸ್ಥೂಲವಾಗಿ ಈ ಭೇದವಿದೆ. ರೂಢಿಯಲ್ಲಿ ಇದನ್ನು ಹಳಗನ್ನಡ ಮತ್ತು ಹೊಸಗನ್ನಡ ಸಾಹಿತ್ಯವೆಂದು ಕರೆಯುತ್ತೇವೆ'[1]. ಹೊಸಗನ್ನಡ ಸಾಹಿತ್ಯವು ವಿಶಿಷ್ಟ ಸಂದರ್ಭದಲ್ಲಿ ಮೊದಲಾಯಿತು ಎನ್ನಬಹುದು. ದೇಶದಲ್ಲಿ ಪ್ರಾಂತೀಯ ರಾಜರುಗಳು ಮತ್ತು ಬ್ರಿಟೀಷರುಗಳು ಆಳ್ವಿಕೆ ನಡೆಸುತ್ತಿದ್ದ ಕಾಲ. ಈ ಕಾಲದಲ್ಲಿ 'ಆಡಳಿತ, ವ್ಯವಹಾರ, ಮುದ್ರಣಯಂತ್ರ, ಕ್ರಿಸ್ತಮತ ಪ್ರಚಾರ, ಹೊಸಶಿಕ್ಷಣ ಪದ್ಧತಿ ಮತ್ತು ಹೊಸ ವಿಚಾರ ಸರಣಿ'[2] ಭಾರತೀಯರಿಗೆ ಒದಗಿ ಬಂದವು. ಇವುಗಳು ಭಾರತೀಯರನ್ನು ಬೆರಗುಗೊಳಿಸಿದವು. ಆಗ ಇಲ್ಲಿನ ಜನರಲ್ಲಿ ಲೌಕಿಕ ಮತ್ತು ವ್ಯಕ್ತಿಗತವಾದ ದೃಷ್ಟಿಕೋನ ಬೆಳೆಯಿತು. ಇದರಿಂದ ಜನತೆಯಲ್ಲಿ ಸ್ವಾಭಿಮಾನ ಮತ್ತು ಸ್ವತಂತ್ರ ವಿಚಾರ ಸರಣಿ ಬೆಳೆದವು. ಅದರ ಫಲವೇ ಕನ್ನಡದಲ್ಲಿ ಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡವು. ಇವೆಲ್ಲವುಗಳು ಆಯಾ ಕಾಲದ ಪ್ರಭಾವಕ್ಕೊಳಗಾಗಿ ರೂಪುಗೊಂಡವುಗಳೇ ಆಗಿದ್ದವು.

ಹೊಸಗನ್ನಡದ ಆರಂಭದ ಕಾಲದಲ್ಲಿ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಯು ತಾರಕಕ್ಕೇರಿತ್ತು. ಚಳುವಳಿಯ ಬಿಸಿ ಕನ್ನಡ ಸಾಹಿತ್ಯದ ಮೇಲೆ ದಟ್ಟವಾದ ಪರಿಣಾಮವನ್ನು ಬೀರಿತು. ಹೊಸಗನ್ನಡ ಸಾಹಿತ್ಯದ ಮೇಲೆ ಸ್ವಾತಂತ್ರ್ಯ ಚಳುವಳಿಯು ಎಷ್ಟರಮಟ್ಟಿಗೆ ಪ್ರಭಾವ ಬೀರಿದೆಯೋ! ಅಷ್ಟೇ ಪ್ರಮಾಣದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಕನ್ನಡ ಸಾಹಿತ್ಯವು ಪ್ರೇರಣೆಯಾಗಿದ್ದು ನಿಜ. ಎರಡನ್ನೂ ಬಿಡಿಸಿ ನೋಡಲು ತುಸು ಕಷ್ಟವಾಗಬಹುದು.

1942ರ 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' ಎಂಬ ವಾಕ್ಯ ಭರತ ಖಂಡದ ಅಸಂಖ್ಯ ಜನರನ್ನು ಹುರಿದುಂಬಿಸಿತು. ಆಗ ಚಳುವಳಿಯ ಮುಖಂಡರನ್ನೆಲ್ಲ ಬಂಧಿಸಿ ಅಜ್ಞಾತ ಸ್ಥಳಕ್ಕೆ ಸಾಗಿಸಿ, ಬ್ರಿಟೀಷ್ ಸರಕಾರ ದೇಶಕ್ಕೆ ಆಹ್ವಾನ ಕೊಟ್ಟಿತ್ತು. ಈ ಆಹ್ವಾನಕ್ಕೆ ಸೆಡ್ಡು ಹೊಡೆದ ಅನೇಕರು ಬ್ರಿಟೀಷರ ವಿರುದ್ಧ ಸಿಡಿದೆದ್ದರು. ಇದು ಬರಹಗಾರರಿಗೆ ಬರೆಯಲು ಸ್ಫೂರ್ತಿಯನ್ನು ನೀಡಿತೆನ್ನಬಹುದು.

ಆಗ ಕನ್ನಡದಲ್ಲಿ ಬರೆಯುತ್ತಿರುವವರಲ್ಲಿ ಶಾಂತಕವಿಗಳು ಬರೆದ 'ದೇಶಾಭಿಮಾನ', ಆಲೂರ ವೆಂಕಟರಾಯರ 'ನಾವು ಈಗ ಬೇಡುವ ಸ್ವರಾಜ್ಯ', ಪಂಡಿತ ತಾರಾನಾಥರು ಬರೆದ 'ಲೇಖನಗಳು', ಕಪಟರಾಳ ಕೃಷ್ಣರಾವ್ ಅವರ ಲೇಖನಗಳು, ಕೃಷ್ಣಾಜಿ ಅನಂತ ಅವರ 'ಲಾವಣಿ', ಕುವೆಂಪು ಅವರ 'ಪಾಂಚಜನ್ಯ', ಬಸವರಾಜ ಕಟ್ಟೀಮನಿ ಅವರು ಸೆರೆಮನೆಯಲ್ಲಿದ್ದುಕೊಂಡೇ ಬರೆದ 'ಆಗಸ್ಟ್ ಒಂಭತ್ತು, ರಕ್ತ–ಧ್ವಜ, ಹುತಾತ್ಮ, ಜನವರಿ ಇಪ್ಪತ್ತಾರು, ಅಜ್ಞಾವಾಸಿ, ಸೆರೆಯಿಂದ ಹೊರಗೆ, ಮೂವರು ಸೈನಿಕರು ಎಂಬ ಕಥೆಗಳು ಹಾಗೂ ಸ್ವಾತಂತ್ರ್ಯದೆಡೆಗೆ, ಕಾದಂಬರಿಗಳು', ಶಾಂತರಸರು ಸಂಪಾದಿಸಿದ 'ಮುಸುಗುತೆಗೆ', ಶೋಯೆಬುಲ್ಲಾ ಖಾನ್ ಬರೆದ ಲೇಖನಗಳು ಮುಂತಾದವರ ಬರಹಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ದಟ್ಟವಾದ ಛಾಯೆಯನ್ನು ಕಾಣಬಹುದು.

ಶಾಂತಕವಿ (ಸಕ್ಕರಿ ಬಾಳಾಚಾರ್ಯರು) ಬರೆದ 'ನಮ್ಮದೀ ನಮ್ಮದೀ ಭರತ ಭೂಮಿ' ಎನ್ನುವ ಕವನದಲ್ಲಿ ಭಾರತ ಪರದೇಶೀಯರ ದಾಸ್ಯದ ನಾಡಾದುದಕ್ಕೆ ಕವಿಗಳು ವ್ಯಥೆಪಡುತ್ತಾರೆ. 'ಭಾರತ ಜನತೆಯು ಸ್ವಾಭಿಮಾನವನ್ನು ತಾಳಬೇಕು. ಗುಲಾಮತನವ ಬಿಡಬೇಕು. ಎದ್ದು ಬನ್ನಿರೈ ಎಂದು ಕರೆ ಕೊಡುತ್ತಾ

[1]. ಡಾ.ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ–ಕನ್ನಡ ಅಧ್ಯಯನ ಸಂಸ್ಥೆ, ಮೈವಿ.ವಿ., ಮೈಸೂರು, 1974 ಪುಟ 1

[2] . ಡಾ.ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ–ಕನ್ನಡ ಅಧ್ಯಯನ ಸಂಸ್ಥೆ, ಮೈವಿ.ವಿ., ಮೈಸೂರು, 1974 ಪುಟ 13

ಭರತ ಭೂಮಿಯು ನಮ್ಮ ಅಪೂರ್ವ ಪಾಠ ಶಾಲೆಯೆಂದು' ವರ್ಣಿಸುತ್ತಾರೆ.

ಆಲೂರ ವೆಂಕಟರಾಯರು 1917ರಲ್ಲಿ 'ನಾವು ಈಗ ಬೇಡುವ ಸ್ವರಾಜ್ಯ'ವೆಂಬ ಕೃತಿಯಲ್ಲಿ ರಾಷ್ಟ್ರೀಯತೆ ಮತ್ತು ರಾಷ್ಟ್ರಾಭಿಮಾನವನ್ನು ಚಿತ್ರಿಸಿದರು.

ಹರ್ಡೇಕರ ಮಂಜಪ್ಪನವರು 'ಎಚ್ಚೆತ್ತ ಹಿಂದುಸ್ಥಾನ' ಎಂಬ ಕೃತಿಯನ್ನು ಬರೆದರೆ, ಕೃಷ್ಣಾಜಿ ಅನಂತ ಅವರು 'ಕಿತ್ತೂರ ಚನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದ ಬಾಬಾ ಸಾಹೇಬ'ರಂತಹ ಸ್ವಾತಂತ್ರ್ಯ ಸೇನಾನಿಗಳ ಚರಿತ್ರೆಯನ್ನು ರಚಿಸಿದರು.[3]

> "ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ!
> ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ!
> ಬೆಚ್ಚ ಬಿಡು, ನೆಚ್ಚ ನೆಡು ಕೆಚ್ಚೆದೆಯ ಗುಡಿಯಲ್ಲಿ;
> ಸೆರೆಯ ಹರಿ, ಅರಿಯನಿರಿ, ಹುಟ್ಟಳಿಸು ಹುಡಿಯಲ್ಲಿ!
> ನಾನಳಿವೆ, ನೀನಳಿವೆ ನಮ್ಮೆಲುಬುಗಳ ಮೇಲೆ
> ಮೂಡುವುದು ಮೂಡುವುದು ನವ ಭಾರತದ ಲೀಲೆ!"[4]

ಎಂದು ಕುವೆಂಪು ಅವರ ಈ ಕವಿತೆ ಚಳುವಳಿಗಾರರಿಗೆ ಪ್ರೇರಣೆಯನ್ನು ನೀಡುವಂತಿದೆ. ಗೋಪಾಲಕೃಷ್ಣ ಅಡಿಗರು 'ತೊಲಗು ತೊಲಗು ತೊಲಗಾಚೆ ತೊಲಗು। ಬಿಳಿದೊಗಲ ಸುಲಿಗೆಗಾರ। ನಾವಲ್ಲ ತೊತ್ತು; ನಿನಗಲ್ಲ ತುತ್ತು. ನಮ್ಮಾಸೆ, ನುಡಿ, ವಿಚಾರ; ಇಂದು ಮನಸಾ ಸ್ವತಂತ್ರರೋ; ನಮ್ಮ ದೇಹಯಂತ್ರ ನಿನ್ನ ಬೆಸಕೆ ಸಂಚಲಿಸದಣ್ಣ. ಹೋ! ಎಂಬ ವೀರ ಮಂತ್ರ ಹೆಣ್ಣು ಗಂಡುಗಳ ಕೂಸು ಕುನ್ನಿಗಳ ಕೊರಳಿನಲ್ಲಿ ಕೆರಳಿ ದಿಗ್ದಿಗಂತದಲ್ಲಿ ಮೊಳಗಿ ಮೊಳಗಿ ಮಾರ್ಮಲೆದುದುಭ್ರದಲ್ಲಿ!'[5] ಎಂಬ ಕವಿತೆಗಳು ರಚನೆಯಾದವು. ಇವುಗಳೇ ಜನರ ಮನದಲ್ಲಿ ಸಿಂಹದ ಬಲವನ್ನು ತುಂಬಿದವು.

"ಜಿ. ರಾಮರಾವ ಹಜೀಬ ಅವರು ಬರೆದ 'ಕರ್ನಾಟಕ ವೀರರೇಳಿ' ಪದ್ಯವು ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ಎಲ್ಲ ವೀರರನ್ನು ಹೆಸರಿಸುತ್ತಾ ಗಾಂಧೀಜಿಯವರನ್ನು 'ಕಲಿಭೀಮ'ನೆಂದು ವರ್ಣಿಸುತ್ತಾರೆ. ಅಜ್ಞಾತ ಕವಿಯೊಬ್ಬ 'ರಣಗೀತ' ಎಂಬ ಪದ್ಯವನ್ನು ಬರೆದಿದ್ದಾನೆ. ಈ ಪದ್ಯದಲ್ಲಿ ಸ್ವಾತಂತ್ರ್ಯ ವೀರರು ಬರುವದನ್ನು ಹೀಗೆ ವರ್ಣಿಸುತ್ತಾರೆ 'ಬಿಸಿಲು, ಚಳಿ, ಹಸಿವನು ಲೆಕ್ಕಿಸದೆ, ಬೆತ್ತದ, ಕತ್ತಿಯ ಹೊಡೆತವ ಸಹಿಸಿಕೊಳ್ಳುತ್ತ, ರೋಷದಿಂದ ರಣದೊಳು ಹೋರಾಡುವೆವು, ನಗುತ್ತ ಶೂಲವನ್ನೇರುವೆವು, ಹಾಡುತ್ತಾ ರಣದೊಳು ಸಾಯುವೆವು ನಾಡಿನ ಮಾನವ ಕಾಯುವೆವು' ಎಂದು ಬರೆಯುತ್ತಾರೆ. ಇದೇ ರೀತಿಯಾಗಿ ಬಿ.ನೀಲಕಂಠಯ್ಯ ಅವರ 'ವಂದೇ ಮಾತರಂ', ಶ್ರೀಧರ್ ಖಾನೋಲ್ಕರ್ ಅವರ 'ದೇಶೀಯ ದುಮದುಮ್ಮೆ, ಸಿಂಪಿಲಿಂಗಣ್ಣ ಅವರ 'ಬಹುರೂಪಿ', ಪುಂಡೂರು ಲಕ್ಷ್ಮಿನಾರಾಯಣ ಅವರ 'ಖಾದಿಯ ಹಾಡು', ಅಜ್ಞಾತ ಕವಿಯ 'ಏಕೆ ಧರಿಸುವೆ ಸಾಕು ಬಿಡು ಪರದೇಶಿ ಜನರ ವಸ್ತ್ರವಾ', ಹುಲಕುಂದ ಭೀಮಕವಿಯ 'ಪವಿತ್ರ ಖಾದಿ' ಎಂಬ ಲಾವಣಿ, ಮುದವೀಡು ಕೃಷ್ಣರಾಯರು ಭಾರತದ ಎಲ್ಲ ಜನತೆಗೆ 'ಮರೆತೇ ಏತಕಯ್ಯಾ ಗೇಣು ಭೂಮಿಗಾಗಿ ಎನ್ನ ಪ್ರಾಣ ಹೋಗಲಿ ಎಂದೆನ್ನುವಿ। ಕಾಣದೇನೋ ನಾಡೇ ಪರಾಧೀನವಾಗಿರುವುದು' ಎಂದು ಎಚ್ಚರಿಸುತ್ತಾರೆ. 'ತನುಮನಧನದಿಂದ ಭಾರತಕ್ಕೆ ಬಂದಿರುವ ತೊಂದರೆಗಳನ್ನು ಸರಿಸುತ್ತಾ, ಒಂದು ಗೂಡಿ ಭಾರತದ ಪಾರತಂತ್ರ್ಯವ ಹರಿದೊಗೆವ' ಎಂದು ಬೆಟಗೇರಿ ಕೃಷ್ಣಶರ್ಮರು, ಪೆ.ರ.ಮ. ಅವರ 'ಭಾರತ ಬೋಧೆ'ಯಂತಹ ಗೀತೆಗಳು ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ರಚಿತವಾದವು".[6]

ಪ್ರಗತಿಶೀಲ ಪಂಥದ ಲೇಖಕರಲ್ಲಿ ಬಸವರಾಜ ಕಟ್ಟಿಮನಿಯವರು ಪ್ರಮುಖರು. ಇವರು ರಚಿಸಿದ ಕಥೆ, ಕಾದಂಬರಿಗಳು, ಸ್ವಾತಂತ್ರ್ಯ ಚಳುವಳಿಯನ್ನು ಕಣ್ಮುಂದೆ ತಂದು ನಿಲ್ಲಿಸಿದಂತಿವೆ. 'ಆಗಸ್ಟ್ ಒಂಭತ್ತು' ಕತೆಯು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಗಂಡ ವಿಶ್ವನಾಥ ಬಂಧಿತನಾಗಿ ಕಾರಾಗೃಹದಲ್ಲಿದ್ದ. ಆಗ ಆತನ ಪತ್ನಿ ಜಯಾ ತನ್ನ ಮಗ ಚಂದ್ರಶೇಖರನನ್ನು ಸಂಭಾಳಿಸಿಕೊಳ್ಳುತ್ತ ಅನುಭವಿಸಿದ ನೋವು, ಬಡತನ, ಏಕಾಕಿತನ, ಅಸಹಾಯಕತೆ, ಕಾಮುಕ ಜನರ ಕಾಟ ಮತ್ತು ಪೋಲೀಸರ ಉಪಟಳವನ್ನು ಸಮರ್ಥವಾಗಿ ಎದುರಿಸುತ್ತಾಳೆ. ಆಕೆ ಆ ಸಂದರ್ಭದಲ್ಲಿ ತೋರಿದ ಧೈರ್ಯ, ದೇಶಭಕ್ತಿ ಅನುಪಮವಾದುದು. ಕೊನೆಗೆ ಮನೆಯಲ್ಲಿ ತಿನ್ನಲು ಆಹಾರವೂ ಇಲ್ಲವಾದಾಗ ಮಗ ಚಂದ್ರಶೇಖರ ದಿನಪತ್ರಿಕೆ ಮಾರಿ ಬಂದ ಹಣವನ್ನು ತಾಯಿಗೆ ನೀಡುತ್ತಾ 'ಸಂಜೆ ಹೊತ್ತು ದಿನಪತ್ರಿಕೆ ಮಾರಿದರೆ ನಾಲ್ಕೈದಾಣೆ ಸಿಕ್ಕುತ್ತಮ್ಮಾ. ಇನ್ನು ಮುಂದೆ ನೀನು ಶಾಲೆಗೆ ಹೋಗುವುದು ಬೇಡ, ಬಿಟ್ಟುಬಿಡು. ನಾನು ದೊಡ್ಡವನಾಗಲಿಲ್ಲವೇ? ಅಪ್ಪ ಬರುವವರೆಗೆ ನಾನೇ ದುಡಿದುಕೊಂಡು ಬರುತ್ತೇನೆ. ಬೇಕಾದರೆ ಶಾಲೆಯನ್ನು ನಾನೇ ಬಿಟ್ಟುಬಿಡುತ್ತೇನೆ" ಎನ್ನುತ್ತಾನೆ. ಇಲ್ಲಿ ವಯಸ್ಸಿನಲ್ಲಿ ಚಿಕ್ಕವನಾದ ಬಾಲಕ ಚಂದ್ರಶೇಖರನ ಪ್ರಬುದ್ಧ ತಿಳುವಳಿಕೆ ಮಾದರಿಯಾಗಿರುವಂತಹುದು.

'ಬಲಿ' ಕಥೆಯು ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಯೊಬ್ಬ ಜೈಲಿನ ಅಧಿಕಾರಿಗಳ ನಿರಂತರ ಕ್ರೌರ್ಯಕ್ಕೆ ಬಲಿಯಾದ ಕಥೆಯಿದು. ಸಾವಿರಾರು ಜನ ಚಳುವಳಿಗಾರರಲ್ಲಿ ಭಾರತಮಾತೆಯ ಸ್ಮರಣೆಯಲ್ಲಿ ತನ್ನ ಪ್ರಾಣ ಕೊಟ್ಟ ಕಥೆ 'ಹುತಾತ್ಮ'. ಪುರಾಣದ ಕಥೆಯ ಪಾತ್ರಗಳನ್ನು ನೆನಪಿಸುವಂತಹ ಕಥೆ 'ಸತ್ಯವಾನ ಮರಳಲಿಲ್ಲ'. ಪುರಾಣದ ಕಥೆಯಲ್ಲಿ ಸತ್ಯವಾನನನ್ನು ಸಾವಿತ್ರಿ ಬದುಕಿಸಿಕೊಳ್ಳುತ್ತಾಳೆ. ಆದರೆ ಈ ಕಥೆಯಲ್ಲಿ ಸಾವಿತ್ರಿಯು ಸತ್ಯವಾನನನ್ನು ಕಾಣಲಾಗುವುದಿಲ್ಲ. ತನ್ನ ಗೆಳತಿಯ ಗರ್ಭದಲ್ಲಿ ಮಗುವಾಗಿ ಗಂಡನ ಬರುವಿಕೆಯ ಭ್ರಮೆಯಲ್ಲಿ ಮನೋವಿಕಾರಕ್ಕೆ ಒಳಗಾಗಿ ನೋವು ಅನುಭವಿಸುವ ಕಥೆ 'ಸತ್ಯವಾನ ಮರಳಲಿಲ್ಲ'.

ಕಿಶನ್ ಎಂಬ ಹತ್ತು ವರ್ಷದ ಬಾಲಕ ಕೋರ್ಟಿನ ಮೇಲೆ ತ್ರಿವರ್ಣ ಧ್ವಜ ಕಟ್ಟಿ ಹಾರಿಸಿ ದಿಟ್ಟ ಪ್ರೇಮವನ್ನು ಮೆರೆಯುತ್ತ ಪೋಲೀಸರ ಗುಂಡಿಗೆ ಬಲಿಯಾದ ಬಾಲಕನ ಕಥೆ 'ರಕ್ತಧ್ವಜ'. ಗುಂಡು ಬಡಿಸಿಕೊಂಡು ಗೋಪುರದಿಂದ ನೆಲಕ್ಕುರುಳುವ ಬಾಲಕ 'ಮುಗಿಲಿನಿಂದ ಉರುಳುವ ಚುಕ್ಕೆಯಂತೆ ಕೆಳಕ್ಕುರುಳಿತು. ಆ ಧ್ವಜ ಮಾತ್ರ ಡೌಲಿನಿಂದ ಗೋಪುರದ ಮೇಲೆ ಹಾರಾಡುತ್ತಿತ್ತು. ಆ ಬಾಲಕನ ರಕ್ತದ ಕುಂಕುಮವನ್ನು ಧರಿಸಿಕೊಂಡ 'ರಕ್ತಧ್ವಜ' ಬಾನಂಗಳದಲ್ಲಿ ಹಾರಾಡುತ್ತ ಪರಂಗಿಯವರನ್ನು ಅಣಕಿಸುವಂತಿತ್ತು. ಚಿಕ್ಕ ಬಾಲಕನ ಸ್ವಾತಂತ್ರ್ಯ ಪ್ರೇಮವನ್ನು ಮನಮುಟ್ಟುವಂತೆ ಬಸವರಾಜ ಕಟ್ಟೀಮನಿಯವರು ಚಿತ್ರಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರನೊಬ್ಬನ ಪತ್ನಿ ನಾಗಮ್ಮ. ತನ್ನ ಗಂಡ

---

[3] . ರಾ.ಯ.ಧಾರವಾಡಕರ, ಹೊಸಗನ್ನಡ ಸಾಹಿತ್ಯದ ಉದಯಕಾಲ– ಕ.ವಿ.ವಿ.ಧಾರವಾಡ. 1975. ಪುಟ–577.

[4] . ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಸಂಪುಟ–14. ಪುಟ18. ಪ್ರಸಾರಂಗ, ಬ.ಕ.ಪ್ರತಿಷ್ಠಾನ, ಬೆಳಗಾವಿ.–2014

[5] . ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಸಂಪುಟ–14. ಪುಟ 18. ಪ್ರಸಾರಂಗ, ಬ.ಕ.ಪ್ರತಿಷ್ಠಾನ, ಬೆಳಗಾವಿ.–2014

[6] . ಡಾ.ಸೂರ್ಯನಾಥ ಕಾಮತ್, ಬಿಡುಗಡೆಯ ಹಾಡುಗಳು–ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ 1997.

ಬರುವವರೆಗೆ ಪೋಲೀಸರು ಎಸಗಿದ ಅತ್ಯಾಚಾರ, ಚಿತ್ರಹಿಂಸೆಯನ್ನು ತಾಳಿಕೊಂಡು ಗಂಡನ ಬರುವಿಕೆಗಾಗಿ ದಾರಿ ಕಾಯುತ್ತಾಳೆ. ಗಂಡ ಚನ್ನಬಸವ ಬಂದ ನಂತರ ಗಂಡನ ತೊಡೆಯ ಮೇಲೆ ಪ್ರಾಣ ಬಿಡುವ ಮುನ್ನ ದುಷ್ಟರ ಸಂಹಾರಕ್ಕಾಗಿ ವಚನ ಪಡೆದ ಸಾಧ್ವಿಯ ಕತೆ 'ಅಜ್ಞಾತವಾಸಿ'.

ಹೀಗೆ 'ಸ್ವಾತಂತ್ರ್ಯ ಚಳುವಳಿ'ಯು ಬಹಳಷ್ಟು ಬರಹಗಾರರ ಮೇಲೆ ಪ್ರಭಾವ ಬೀರುವ ಮೂಲಕ ಚಳುವಳಿಯ ಸಮಗ್ರ ಚಿತ್ರವನ್ನು ಕಟ್ಟಿಕೊಡುವಲ್ಲಿ ಯಶಸ್ಸು ಕಂಡಿತು. ಆ ಸಾಹಿತ್ಯವು ಇಂದಿನ ತಲೆಮಾರಿಗೆ ಒಂದು ಇತಿಹಾಸ, ಕಥೆ, ಕಾದಂಬರಿ, ನಾಟಕ, ಲಾವಣಿ ರೂಪಗಳಲ್ಲಿರುವಂತಹದ್ದು. ಆದರೆ ಅಂದು ಬ್ರಿಟೀಷರ ಕಪಿ ಮುಷ್ಟಿಯಿಂದ ಭಾರತವನ್ನು ಬಿಡಿಸಲು ಅನೇಕರು ಪಟ್ಟ ಶ್ರಮ, ಮಾಡಿದ ತ್ಯಾಗ ಅಮರವಾದುದು. ಇಂದು ಆ 'ಸ್ವಾತಂತ್ರ್ಯ'ವನ್ನು ಅರ್ಥಪೂರ್ಣವಾಗಿ ನಾವು ಉಳಿಸಿಕೊಳ್ಳಬೇಕಾಗಿದೆ. ಇಂದಿನ ಈ ವಿಚಾರ ಸಂಕಿರಣದ ಮೂಲಕ ಸ್ವಾತಂತ್ರ್ಯ ಚಳುವಳಿಯ ಆ ಅಮರ ವೀರರಿಗೆ ನಮ್ಮದೊಂದು ದೊಡ್ಡ ಸಲಾಮ್ ಸಲ್ಲಿಸಬೇಕಾಗಿದೆ. ಜೈಹಿಂದ್.

**ಸಹಾಯಕ ಗ್ರಂಥಗಳು**


1. ರಂ.ಶ್ರೀ.ಮುಗಳಿ–ಕನ್ನಡ ಸಾಹಿತ್ಯ ಚರಿತ್ರೆ–ಗೀತಾ ಬುಕ್ ಹೌಸ್, ಮೈಸೂರು, 1993
2. ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಸಂಪುಟ–14.– ಪ್ರಸಾರಂಗ, ಬ.ಕ.ಪ್ರತಿಷ್ಠಾನ, ಬೆಳಗಾವಿ, 2014
3. ಡಾ.ಸೂರ್ಯನಾಥ ಕಾಮತ್, ಬಿಡುಗಡೆಯ ಹಾಡುಗಳು– ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 1997
4. ರಾ.ಯ.ಧಾರವಾಡಕರ, ಹೊಸಗನ್ನಡ ಸಾಹಿತ್ಯದ ಉದಯಕಾಲ–ಕ.ವಿ.ವಿ.ಧಾರವಾಡ. 1975.
5. ಡಾ.ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ–ಕನ್ನಡ ಅಧ್ಯಯನ ಸಂಸ್ಥೆ, ಮೈವಿ.ವಿ., ಮೈಸೂರು, 1974
6. ಎಲ್.ಎಸ್.ಶೇಷಗಿರಿರಾವ್–ಹೊಸಗನ್ನಡ ಸಾಹಿತ್ಯ ಚರಿತ್ರೆ, ಸಪ್ನ ಬುಕ್ ಹೌಸ್, ಬೆಂಗಳೂರು